ದಿನಾಂಕಃ 26.06.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಡಿ. ವಕೀಲರಿಂದಃ</u>**

**1.** ನನ್ನ ಹೆಸರಿನಲ್ಲಿ ಬ್ಯಾಂಕ್ ಖಾತೆ ಇಲ್ಲ. ನನ್ನ ಮನೆಯ ವ್ಯವಹಾರವನ್ನು ನಾನೇ ಮಾಡುತ್ತೇನೆ. ನನ್ನ ತಂದೆಯ ಬ್ಯಾಂಕ್ ಖಾತೆಗೆ ಸಂಬಂಧಪಟ್ಟ ವ್ಯವಹಾರವನ್ನು ನಾನು ಸಹಾ ಮಾಡುತ್ತೇನೆ. ನಾನು ನನ್ನ ತಂದೆಯಿಂದ ಅಧಿಕಾರ ಪತ್ರ ಪಡೆದಿಲ್ಲ. ನನ್ನ ತಂದೆಯ ಬ್ಯಾಂಕ್ ಅಕೌಂಟ್ ಮೂಲಕ ಆರೋಪಿಗೆ ಹಣ ಕೊಟ್ಟಿಲ್ಲ, ಆದರೆ ನಗದಾಗಿ ಕೊಟ್ಟಿದ್ದೇನೆ. ದೂರಿನಲ್ಲಿ ತಿಳಿಸಿರುವ ವ್ಯವಹಾರದ ಬಗ್ಗೆ ನನ್ನ ತಂದೆಗೆ ತಿಳಿಸಿದ್ದೇನೆ. ಆರೋಪಿಗೆ ಹಣ ಕೊಡಲು ನನ್ನ ತಂದೆಯ ಬ್ಯಾಂಕ್ ಖಾತೆಯಿಂದ ಹಣ ವಿತ್ ಡ್ರಾ ಮಾಡಿಲ್ಲ, ಆದರೆ ಅವರಿಂದ ರೂ.5 ಲಕ್ಷ ಹಣ ನಗದಾಗಿ ಪಡೆದುಕೊಂಡಿದ್ದೆ. ಆ ರೀತಿ 2020 ನೇ ಇಸವಿ ನವೆಂಬರ್ ತಿಂಗಳಲ್ಲಿ ಹಣ ಪಡೆದಿದ್ದೆ. ಆ ಹಣವನ್ನು ಒಂದು ದಿನ ಸಂಜೆ ಸಮಯಕ್ಕೆ ನನ್ನ ತಂದೆಯಿಂದ ಪಡೆದು ಮರುದಿನ ಬೆ.11.30 ರ ಸಮಯಕ್ಕೆ ಆರೋಪಿಗೆ ಕೊಟ್ಟಿದ್ದೆ. ನಾನು ಹೇಳಿದಂತೆ ನನ್ನ ತಂದೆಯಿಂದ ನಾನು ಯಾವುದೇ ಹಣ ಪಡೆದಿರಲಿಲ್ಲ ಎಂದರೆ ಸರಿಯಲ್ಲ.

**2.** ನಿಪಿ-7 ಮತ್ತು 8 ರ ಪ್ರಕಾರ ನನ್ನ ತಂದೆ ಎಲ್ಲಾ ವ್ಯವಹಾರಗಳನ್ನು ಅಕೌಂಟ್ ಮೂಲಕ ಮಾಡಿದ್ದಾರೆ ಎಂದರೆ ಸರಿ. ಆರೋಪಿಗೆ ಹಣ ಕೊಡಬೇಕು ಎಂದು ನನ್ನ ತಂದೆಯ ಬಳಿ ಹೇಳಿದ್ದೆ. ಆರೋಪಿ ನನಗೆ 10 ವರ್ಷಗಳಿಂದ ಪರಿಚಯ. ಈಗ ನೋಡುತ್ತಿರುವ ದಾಖಲೆ ನನ್ನ ಹಾಗೂ ದರ್ಶನ್ ಎನ್ನುವವರ ನಡುವೆ ಆದ ಒಪ್ಪಂದ ಕರಾರು ಪತ್ರ ಹಾಗೂ ಅದರಲ್ಲಿರುವ ಸಹಿ ನನ್ನದೇ ಎಂದರೆ ಸರಿ. ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ದರ್ಶನ್ ಆರೋಪಿಯ ಸಹೋದರಿಯ ಮಗ ಎಂದರೆ ನನಗೆ ಗೊತ್ತಿಲ್ಲ. ದರ್ಶನ್ ರವರ ಮನೆ ಮತ್ತು ಸೈಟ್ ಖರೀದಿ ಸಂಬಂಧ ನನ್ನ ಹಾಗೂ ಅವರ ನಡುವೆ ಮಾತುಕತೆಯಾಗಿತ್ತು ಎಂದರೆ ಸರಿ. ಆ ವಿಚಾರವಾಗಿ ಆರೋಪಿಯೇ ನನ್ನನ್ನು ದರ್ಶನ್ ರವರಿಗೆ ಪರಿಚಯ ಮಾಡಿಕೊಟ್ಟಿದ್ದು ನಾನು ಅವರ ಜಾಗವನ್ನು ಖರೀದಿಸಲು ಒಪ್ಪಿದ್ದೆ ಎಂದರೆ ಸರಿಯಲ್ಲ. ನಿಡಿ-1 ರ ಪ್ರಕಾರ ಕ್ರಯಪತ್ರ ಮಾಡಿಕೊಂಡಿಲ್ಲ. ಸದರಿ ಸ್ವತ್ತನ್ನು ಖರೀದಿಸುವುದಿಲ್ಲ ಎಂದು ನಾನೇ ತಿರಸ್ಕರಿಸಿದ್ದೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನ ಅಭಿವೃದ್ದಿ ಪಡಿಸಲು ನನಗೆ ಹೇಳಿರಲಿಲ್ಲ.

**3.** ನಿಡಿ-1 ರ ಅಸಲು ಪ್ರತಿ ನಿಮ್ಮ ಬಳಿ ಇದೆಯಾ ಎಂದರೆ ಸಾಕ್ಷಿಯು ಹಣ ವಾಪಸ್ಸು ಪಡೆದ ನಂತರ ಅದನ್ನು ಬಿಸಾಡಿದ್ದೇನೆ ಎಂದು ನುಡಿಯುತ್ತಾರೆ. ನಿಡಿ-1 ನ್ನು ಮಾಡಿಕೊಳ್ಳುವಾಗಿ ದರ್ಶನ್ ರವರಿಗೆ ರೂ.2 ಲಕ್ಷ ಕೊಟ್ಟಿರಬಹುದು. ಆ ಹಣವನ್ನು ಯಾವ ಮೂಲಕ ಕೊಟ್ಟಿದ್ದೇನೆ ಎಂದು ನನಗೆ ನೆನಪಾಗುತ್ತಿಲ್ಲ. ಸದರಿ ಕರಾರು ಆದ 2 ತಿಂಗಳ ನಂತರ ದರ್ಶನ್ ರವರು ನನಗೆ ನಗದು ರೂಪದಲ್ಲಿ ಹಣ ವಾಪಸ್ಸು ಕೊಟ್ಟಿದ್ದಾರೆ. ದರ್ಶನ್ ರವರಿಗೆ ದಿ.26.11.2020 ರಂದು ರೂ.5 ಲಕ್ಷ ಹಣ ನಗದಾಗಿ, ರೂ.1 ಲಕ್ಷ ಮತ್ತು ರೂ.95,000/- ಹಣವನ್ನು ಚೆಕ್ ಮೂಲಕ ಕೊಟ್ಟಿದ್ದೇನೆ ಎಂದು ನಿಡಿ-1 ರಲ್ಲಿ ನಮೂದು ಇದೆ ಎಂದರೆ ಸರಿಯಲ್ಲ. ಸದರಿ ಕರಾರು ಪತ್ರ ಆದ ನಂತರ ಕರಾರು ಪತ್ರದ ಸ್ವತ್ತನ್ನು ನಾನು ಸರ್ವೇ ಮಾಡಿಸಿದ್ದೆ ಎಂದರೆ ಸರಿಯಲ್ಲ. ಸರ್ವೇಯಲ್ಲಿ ವ್ಯತ್ಯಾಸವಾದ ಕಾರಣ ಸ್ವತ್ತು ಖರೀದಿಸುವುದಿಲ್ಲ ಹಣ ವಾಪಸ್ಸು ಕೊಡಿ ಎಂದು ಕೇಳಿದ್ದೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ನಾನು, ದರ್ಶನ್, ಆರೋಪಿ ಮತ್ತು ಆರೋಪಿಯ ತಂದೆ ಸೇರಿ ಪಂಚಾಯಿತಿ ಮಾಡಿದ್ದೆವು ಎಂದರೆ ಸರಿಯಲ್ಲ.

ಆ ದಿನ ದರ್ಶನ್ ರವರು ರೂ.1,95,000/- ಹಣವನ್ನು ಆರೋಪಿಯ ಸಮಕ್ಷಮ ನನಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಉಳಿಕೆ ರೂ.5 ಲಕ್ಷ ಹಣವನ್ನು 2020 ರ ಡಿಸೆಂಬರ್ ತಿಂಗಳಲ್ಲಿ ಕೊಡುವುದಾಗಿ ದರ್ಶನ್ ರವರು ಒಪ್ಪಿದ್ದು ಆ ವಿಚಾರದ ಸಂಬಂಧ ಭದ್ರತೆಗೆಂದು ಆರೋಪಿಯಿಂದ ನಿಪಿ-1 ರ ಚೆಕ್ ನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ.

**4.** ಡಿಸೆಂಬರ್ 2020 ರಲ್ಲಿ ದರ್ಶನ್ ರವರು ನಿಡಿ-1 ರಲ್ಲಿ ನಮೂದಿಸಿರುವ ಪೂರ್ತಿ ಹಣವನ್ನು ನನಗೆ ಮರುಪಾವತಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-1 ನ್ನು ಓದಿ ನೋಡಿಯೇ ಸಹಿ ಮಾಡಿದ್ದೇನೆ. ದರ್ಶನ್ ರವರು ನನಗೆ ಹಣ ಮರುಪಾವತಿ ಮಾಡಿದ್ದರೂ ಸಹಾ ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ನಿಪಿ-1 ರ ಚೆಕ್ ನ್ನು ಬ್ಯಾಂಕಿಗೆ ಹಾಜರುಪಡಿಸಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೇ ಹಣ ಕೊಡಬೇಕಾಗಿಲ್ಲದೇ ಇರುವ ಕಾರಣ ಆರೋಪಿಗೆ ಯಾವ ದಿನಾಂಕ ಹಣ ಕೊಟ್ಟೆ ಎಂದು ದೂರಿನಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ನವೆಂಬರ್ 2020 ರಲ್ಲಿ ಆರೋಪಿಗೆ ಹಣ ಕೊಟ್ಟೆ ಎಂದು ದೂರಿನಲ್ಲಿ ಬರೆಸಿದ್ದೇನೆ. ನಿಡಿ-1 ರ ಕರಾರು ಮಾಡಿಕೊಳ್ಳುವ ಮುನ್ನ ಅಥವಾ ನಂತರ ಆರೋಪಿಗೆ ಹಣ ಕೊಟ್ಟೆನಾ ಎಂದು ನನಗೆ ನೆನಪಿಲ್ಲ. ನಿಡಿ-1 ರ ಅಸಲು ಪ್ರತಿ ನನ್ನ ಬಳಿ ಇದ್ದರು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.